ಟಕಿಲಾಕ್ಕಿರುವ, ಹಿಂಜರಿಕೆಯಿಂದ ಪಾರುಮಾಡುವ ಮತ್ತು ಭಾವನೆಗಳನ್ನ ಹೊರಗಟ್ಟುವ ಸಾಮರ್ಥ್ಯವು ಕೊನೆಯಿರದ ಸ್ಫೂರ್ತಿಯ ಆಗರವಾಗಿದೆ. ಮತ್ತಿದೇ ಸ್ಫೂರ್ತಿಯ ಚಿಲುಮೆ ನನ್ನ ಪದ್ಯಗಳ ಸಾಲುಗಳಲ್ಲಿ ಪದಗಳಾಗಿ ಭಾವನೆಗಳಾಗಿ ಹರಿಯುತ್ತದೆ. ಟಕಿಲಾ ಪ್ರತಿಯೊಬ್ಬ ಮೆಕ್ಸಿಕನ್ ಅನುಭವಿಸುವ ಸ್ವತಂತ್ರ ಮನೋಭಾವವನ್ನು ಎತ್ತಿ ಹಿಡಿಯುತ್ತದೆ.

◆ **ಪುರುಷ ಪ್ರಧಾನ ಮನಸ್ಥಿತಿ ಇರುವ ಯಾವುದೇ ದೇಶಗಳಲ್ಲಿ ಭ್ರೂಣ ಹತ್ಯೆ ಭಾಳ ದೊಡ್ಡ ಸಮಸ್ಯೆ. ಹೊಸ ಜನಗಣತಿಯ ಪ್ರಕಾರ ನಿಮ್ಮಲ್ಲಿ ಫಿಮೇಲ್ ರೆಷಿಯೊ ಜಾಸ್ತಿ ಆಗಿದೆ. ಇದಕ್ಕಿರುವ ಸಮಾಜೋ ರಾಜಕೀಯ ಕಾರಣಗಳೇನು ಅನ್ನುತ್ತೆ?**

ಹೆಣ್ಣು ಭ್ರೂಣ ಹತ್ಯೆ ನಮ್ಮ ಸಮಾಜದಲ್ಲಿ ಲಿಂಗ ತಾರತಮ್ಯವು ಆಳವಾಗಿ ಬೇರೂರಿರುವುದನ್ನ ಪ್ರತಿಬಿಂಬಿಸುವ ನೋವಿನ ಸಂಗತಿ. ಘಾತಿಸುವ ಪುರುಷ ಪ್ರಧಾನ ವ್ಯವಸ್ಥೆಯಂತಹ ಸಾಮಾಜಿಕ ಅಂಶಗಳು, ಮಹಿಳೆಯರು ಶೈಕ್ಷಣಿಕ ಅವಕಾಶಗಳಿಂದ ಮತ್ತು ಆರ್ಥಿಕ ಸಂಪನ್ಮೂಲಗಳಿಂದ ವಂಚಿತರಾಗಿರುವುದು, ಇದರ ಜೊತೆಗೆ ಮಹಿಳೆಯರ ಅಡಿಯಾಳುತನವನ್ನು ಶಾಶ್ವತವಾಗಿಸುವ ಆಡಳಿತ ನೀತಿಗಳು ಮತ್ತದರ ಸಂರಚನೆಗಳು ಈ ಕಳವಳಕಾರಿ ವಿದ್ಯಮಾನಕ್ಕೆ ಕಾರಣಗಳಾಗಿವೆ. ಈ ವಿಷಯಗಳನ್ನು ತುರ್ತಾಗಿ ಮತ್ತು ದೃಢವಾಗಿ ಸರಿಪಡಿಸಿಕೊಳ್ಳುವುದು ಅತ್ಯವಶ್ಯಕ. ಆ ಮೂಲಕ ಮಾತ್ರ ಒಂದು ನ್ಯಾಯಯುತ ಸಮಾನತೆಯ ಭವಿಷ್ಯವನ್ನು ರೂಪಿಸಬಹುದು. ಇದಕ್ಕಿರುವ ದಾರಿ ಒಂದೇ: ಸಮಾನತೆಯ ಆಶಯುಳ್ಳ ಸಾಮಾಜಿಕ ಶಿಕ್ಷಣ ವ್ಯವಸ್ಥೆಯ ಅನುಷ್ಠಾನ.

◆ **'ಚುಲೊ' ಅಥವಾ 'ಚುಲಾ' ಎಂಬ ಸ್ಪ್ಯಾನಿಷ್ ಪದವನ್ನು ನೀವು ಅದರೆಲ್ಲಾ ಧನಾತ್ಮಕ ಮತ್ತು ಋಣಾತ್ಮಕ ಅರ್ಥಛಾಯೆಗಳೊಂದಿಗೆ ವಿವರಿಸಬಹುದೇ?**

ಮೆಕ್ಸಿಕನ್ ಸಂಸ್ಕೃತಿಯಲ್ಲಿ, ಧನಾತ್ಮಕ ಮತ್ತು ಋಣಾತ್ಮಕ ಎರಡೂ ಅರ್ಥಗಳಿಂದ ಆವರಿಸಿರುವ ಪದ ಚುಲೊ ಅಥವಾ ಚುಲಾ. ಇದು ಅಹಂಕಾರ ಅಥವಾ ದಾರ್ಷ್ಟ್ಯವನ್ನ ಸೂಚಿಸುತ್ತದೆ. ಹಾಗೆಯೇ ಮೆಚ್ಚುಗೆ ಅಥವಾ ಅಭಿಮಾನವನ್ನೂ ವ್ಯಕ್ತಪಡಿಸುತ್ತದೆ. ಇದೊಂದು, ಮನುಷ್ಯನ ಸಂಕೀರ್ಣತೆಗಳನ್ನ ಪ್ರತಿಫಲಿಸುವ ಮತ್ತು ಸಂಸ್ಕೃತಿಯನ್ನ ಗ್ರಹಿಸುವ, ಅಪಾರ ವೈರುಧ್ಯಗಳಿಂದ ಕೂಡಿರುವ ಪದ ಅಥವಾ ನುಡಿಗಟ್ಟು ಎನ್ನಬಹುದು. ಮೆಕ್ಸಿಕೋದಲ್ಲಿ ಈ ಪದದ ಬಳಕೆ ಹೇಗಿದೆಯೆಂದರೆ, ಏಕಕಾಲದಲ್ಲಿ ನೀವು ಯಾರನ್ನಾದರೂ ಇಷ್ಟ ಪಡುತ್ತಿರಲೂಬಹುದು ಅಥವಾ ನಿರಾಕರಿಸುತ್ತಲೂ ಇರಬಹುದು. ಅಷ್ಟೊಂದು ಭಾವ ಸಂಕೀರ್ಣತೆ ಇರುವ ನುಡಿಗಟ್ಟು ಇದು.

◆ **ಪದೇ ಪದೇ ನಿಮಗೆ ಬೀಳುವ ಕನಸು ಯಾವುದು? ಹಾಗೇನಾದರೂ ಇದ್ದರೆ ಹಂಚಿಕೊಳ್ಳಿ...**

ಮತ್ತೆ ಮತ್ತೆ ಕಾಡುವ ಕನಸುಗಳೆಂದರೆ, ಮನಸ್ಸಿನೊಳಗೆ ಮತ್ತೆ ಮತ್ತೆ ಪುನರಾವರ್ತನೆ ಆಗುತ್ತಿರುವ ಡ್ರಾಯಿಂಗ್ ಪುಸ್ತಕವೊಂದರ ಪುಟಗಳಂತೆ. ಪ್ರತಿ ಪುಟಕ್ಕೂ ಅದರದೇ ಆದ ವಿಶಿಷ್ಟ ಕಥಾನಕಗಳಿವೆ. ನನ್ನನ್ನೇ ನಾನು ಕಂಡುಕೊಳ್ಳಲು ಕೆಲವೊಮ್ಮೆ ಅಸ್ಪಷ್ಟ ಲ್ಯಾಂಡ್ ಸ್ಕೇಪುಗಳಂತೆ ಸಂಕೇತಗಳಲ್ಲಿ ಬಿಚ್ಚಿಕೊಂಡರೆ, ಇನ್ನು ಕೆಲವೊಮ್ಮೆ ಗತದ ತೀಕ್ಷ್ಣ ಭಾವನೆಗಳು ತುಂಬಿದ ಕ್ಷಣಗಳಿಂದ ಕಳಚಿಕೊಳ್ಳಲು ಯತ್ನಿಸುತ್ತೇನೆ ಅನಿಸುತ್ತೆ. ಈ ಕನಸುಗಳು ನನ್ನ ಅಂತಃಪ್ರಜ್ಞೆಯ ಹಾಸು ಹೊಕ್ಕನ್ನು ಹೆಣೆಯುವ ಬಣ್ಣದ ದಾರಗಳಂತೆ ನನ್ನ ನಿಯಂತ್ರಣದಲ್ಲಿಲ್ಲ. ಅವು ಲೋಕವಿರೋಧಿ ಎನಿಸುವ ಗುಪ್ತ ಸತ್ಯಗಳನ್ನು ಮತ್ತು ಆಳದ ಆಕಾಂಕ್ಷೆಗಳನ್ನು ವ್ಯಕ್ತಪಡಿಸುತ್ತವೆ. ಹಾಗೇ ನೋಡಿದರೆ ನನಗೆ ಸಮುದ್ರ ತೀರದಲ್ಲಿ ಒಬ್ಬಳೇ ನಡೆದು ಹೋಗುತ್ತಿರುವ ಕನಸು ಪದೇ ಪದೇ ಬೀಳುತ್ತದೆ. ಮತ್ತದೇ ಅಲೆಗಳು... ಅದೇ ವಿಶಾಲ ಮರಳ ರಾಶಿ... ಮತ್ತೆ ಗಾಳಿಗೆ ಕೂದಲು ಕೆದರಿಕೊಂಡು ನಡೆಯುತ್ತಿರುವ ನಾನು... ಅದು ಸೂರ್ಯೋದಯವೋ ಸೂರ್ಯಾಸ್ತವೋ ತಿಳಿಯುತ್ತಿಲ್ಲ...

◆ **ಸ್ಥಳೀಯ ವಿವೇಕ (Indigenous themes) ಈಗಲೂ ಸಮಕಾಲೀನ ಮೆಕ್ಸಿಕನ್ ಕಲೆ,ಸಾಹಿತ್ಯ ಹಾಗೂ ಸಂಸ್ಕೃತಿಯನ್ನು ಎಷ್ಟರ ಮಟ್ಟಿಗೆ ಪ್ರಭಾವಿಸಿದೆ?**